<u>ದಿನಾಂಕಃ **03/07/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ **2**ನೇ ಎದುರುದಾರರ ಪರ ವಕೀಲರಿಂದಃ</u>

1. ಯಶೋಧ ನನ್ನ ತಾಯಿ. ನನ್ನ ತಾಯಿ ಇಳ್ಳಹಳ್ಳಿಯಲ್ಲಿ ವಾಸವಿದ್ದಾರೆ. ನಾನು ಬೆಂಗಳೂರಿನಲ್ಲಿ ವಾಸವಿದ್ದೇನೆ. ನನ್ನ ತಾಯಿಯ ಜೊತೆ ನನ್ನ ತಂದೆ ಇದ್ದಾರೆ. ನನ್ನ ತಾಯಿಗೆ ಅಪಘಾತ ಹೇಗೆ ಆಗಿದೆ ಎಂದು ನಾನು ನೋಡಿಲ್ಲ. ನನ್ನ ತಾಯಿಗೆ ಅಪಘಾತವಾದ ಸಂಗತಿ ನನಗೆ ಅಪಘಾತ ಆದ ದಿನ ಸಂಜೆ 07.00 ಗಂಟೆಗೆ ತಿಳಿಯಿತು. ಆಗ ನಾನು ಬೆಂಗಳೂರಿನಲ್ಲಿ ಇದ್ದೆನು. ನನ್ನ ತಾಯಿಯನ್ನು ಆಸ್ಪತ್ರೆಗೆ ನನ್ನ ತಂದೆ ಮತ್ತು ಚಿಕ್ಕಪ್ಪ ಕರೆದುಕೊಂಡು ಬಂದಿದ್ದರು. ಮೊದಲು ಅರಕಲಗೂಡಿನ ಸರ್ಕಾರಿ ಆಸ್ಪತ್ರೆಗೆ ನಂತರ ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಸ್ಪತ್ರೆಯಲ್ಲಿ ಇದ್ದಾಗ ನನ್ನ ತಂದೆ ಮತ್ತು ಚಿಕ್ಕಪ್ಪ ಠಾಣೆಗೆ ದೂರನ್ನು ಕೊಟ್ಟಿಲ್ಲ. ನಾನು ಮರುದಿನ ದಿಃ 27-08-2022 ರಂದು ಬಂದೆನು. ನಾನು ಬಂದ ದಿನ ಅಪಘಾತ ಆದ ಬಗ್ಗೆ ಪೊಲೀಸ್ ದೂರನ್ನು ಕೊಟ್ಟಿಲ್ಲ. ಪೊಲೀಸರಿಗೆ ಯಾರು ಯಾವ ದಿನ ದೂರನ್ನು ಕೊಟ್ಟಿದ್ದಾರೆ ಎಂದು ತಿಳಿದುಕೊಂಡಿಲ್ಲ. ನನ್ನ ತಂದೆಯೇ ಕೊಟ್ಟಿರಬಹುದು. ಅಪಘಾತ ಹೇಗೆ ಆಯಿತು ಎಂಬ ವಿಚಾರ ನನಗೆ ಗೊತ್ತಾಗಿತ್ತು. ಆ ಮೋಟಾರ ಸೈಕಲ್ ನನ್ನ ತಂದೆಗೆ ಸಂಬಂಧಿಸಿದೆ. ನನ್ನ ಚಿಕ್ಕಪ್ಪ ಸೋಮಶೇಖರ್ ಆ ವಾಹನವನ್ನು ಓಡಿಸುತ್ತಿದ್ದರು. ನನ್ನ ಚಿಕ್ಕಪ್ಪನಿಗೆ ಯಾವುದೇ ತರಹದ ಗಾಯಗಳು ಆಗಿರಲಿಲ್ಲ. ಗಾಡಿಗೆ ಯಾವುದೇ ತರಹ ಡ್ಯಾಮೇಜ್ ಆಗಿರಲಿಲ್ಲ ಎಂದರೆ ಮುಂದಿನ ಚಕ್ರ ಬೆಂಡಾಗಿತ್ತು ಎನ್ನುತ್ತಾರೆ. ನನ್ನ ತಾಯಿ ಕೆಲಸ ಮಾಡುವಾಗ ಮೇಲಿನಿಂದ ಬಿದ್ದು ಗಾಯಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಾವು ದೂರನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಗಾಯವಾಗಿದ್ದ ಕಾರಣ ಅದಕ್ಕೆ ಪರಿಹಾರ ಪಡೆಯಬೇಕೆಂದು ನನ್ನ ತಂದೆಯ ಗಾಡಿಯನ್ನೇ ನನ್ನ ಚಿಕ್ಕಪ್ಪ ಗಾಡಿಯನ್ನು ಓಡಿಸುತ್ತಿದ್ದರು ಎಂದು ತೋರಿಸಿಕೊಂಡು 5 ದಿನಗಳ ನಂತರ ದೂರನ್ನು ಕೊಟ್ಟು ಪ್ರಕರಣ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಗಾಡಿಗೆ ಯಾವುದೇ ತರ ಹಾನಿಯಾಗಿರಲಿಲ್ಲ ಎಂದರೆ ಸರಿಯಲ್ಲ. ವಾಹನ ಅಪಘಾತದಲ್ಲಿ ಭಾಗಿಯಾಗದೇ ಇರುವ ಕಾರಣ ಅದಕ್ಕೆ ಯಾವುದೇ ಹಾನಿಯಾಗಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ರೇಷನ್ ಕಾರ್ಡ, ಆಧಾರ ಕಾರ್ಡ, ಮತದಾರರ ಗುರುತಿನ ಚೀಟಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ಆ ಅಪಘಾತವಾದ ದಿನವೇ ಹಾಸನದ ಆಸ್ಪತ್ರೆಗೆ

ಕರೆದುಕೊಂಡು ಹೋಗಿದ್ದು ಸರಿಯಾಗಿ ಚಿಕಿತ್ಸೆ ಕೊಡದ ಕಾರಣ SSM ಕರೆದುಕೊಂಡು ಹೋದೆವು. ನಾನು ಹಾಜರುಮಾಡಿರುವ ಬಿಲ್ಲುಗಳಿಗೆ ನಿಪಿ-25 ರಿಂದ 27 ಗಳಿಗೆ ವೈದ್ಯರ ಸಲಹಾ ಚೀಟಿ ಇಲ್ಲ ಎಂದರೆ ಸರಿಯಲ್ಲ. ನಾನು MCA ಮಾಡಿದ್ದೇನೆ. ಬಿಲ್ಲುಗಳನ್ನು ಕೊಡುವಾಗ ಕ್ರಮಬದ್ಧವಾಗಿ ಕೊಡುತ್ತಾರೆ ಎಂದರೆ ನಿಜ. ನಿಪಿ-26 ರಲ್ಲಿ 2948, ನಿಪಿ-27 ರಲ್ಲಿ 2969 ಎಂದು ನಂಬರ್ ಇದೆ ಎಂದರೆ ನಿಜ. ನಿಪಿ-28 ರಲ್ಲಿ ಆಸ್ಪತ್ರೆಯ ವಿವರ ಇಲ್ಲ. ನಿಪಿ-34 ರ ನಂತರದ ಕೆಲವು ಬಿಲ್ಲುಗಳು ಕೈಯಲ್ಲಿ ಬರೆದಿದೆ ಮತ್ತು ಸಂಜೀವಿನಿ ಮೆಡಿಕಲ್ ಸ್ಟೋರ್ ಗೆ ಸಂಬಂಧಿಸಿದೆ ಎಂದರೆ ನಿಜ. ಉಳಿದ ಮೆಡಿಕಲ್ ಬಿಲ್ಲುಗಳನ್ನು ಪರಿಹಾರ ಪಡೆಯಲು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-99 ರಲ್ಲಿ ಆಸ್ಪತ್ರೆಯ ವಿವರ ಇಲ್ಲ. ಸಂಜೀವಿನಿ ಮೆಡಿಕಲ್ ಸ್ಟೋರ್ ನಿಂದ ಪಡೆದುಕೊಂಡಿರುವ ಬಿಲ್ಲುಗಳನ್ನೆಲ್ಲಾ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-180 ರಿಂದ 185 ರವರೆಗಿನ ಬಿಲ್ಲುಗಳು ಮುಂಗಡ ಹಣ ಪಾವತಿಗೆ ಸಂಬಂಧಿಸಿವೆ ಎಂದರೆ ನಿಜ. ನನ್ನ ತಾಯಿ ಕೆಲಸ ಮಾಡುತ್ತಿದ್ದ ಬಗ್ಗೆ ತೋರಿಸಲು ಯಾವುದೇ ದಾಖಲೆ ಇಲ್ಲ. ನನ್ನ ತಾಯಿಯ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ. ನನ್ನ ತಾಯಿ ಬಿಡುಗಡೆ ಆದ ನಂತರ ವೈದ್ಯರು ಫಿಜಿಯೋತೆರಪಿ ಮಾಡಬೇಕೆಂದು ಹೇಳಿದ್ದರು ಎಂದರೆ ನಿಜ. ಬಿಡುಗಡೆಯಾದ ನಂತರ CT scan ಮಾಡಿಸಿಲ್ಲ. X-ray ಮಾಡಿಸಿದ್ದೇವೆ. ಆದರೆ ಹಾಜರು ಮಾಡಿಲ್ಲ. ನನ್ನ ತಾಯಿ ಬಿಡುಗಡೆಯಾದ ನಂತರ followup treatment ಪಡೆದ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಮಾಡಿದ್ದೇವೆ ಎನ್ನುತ್ತಾರೆ. ನನ್ನ ತಾಯಿಗೆ ಸಾಕ್ಷ್ಯ ನುಡಿಯಲು ಬರಲು ಆಗುವುದಿಲ್ಲ ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿದ್ದೇವೆ. ನನ್ನ ತಾಯಿಗೆ ನಾನು ಹೇಳಿದಷ್ಟು ತೀವ್ರ ತರಹದ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಬೇರೆ ರೀತಿ ಆದ ಗಾಯಗಳಿಗೆ ಹಣ ಪಡೆಯಲು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ವಿಮಾ ಕಂಪನಿಯವರು ಪರಿಹಾರ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ಲೋಕೇಶ ಎಂ.ಜಿ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು